# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: "ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (ಐಡಬ್ಲ್ಯುಎಂಪಿ) ಯೋಜನೆಯಡಿ 2009-10, 2010-11 ಮತ್ತು 2011-12ನೇ ಸಾಲಿನಲ್ಲಿ ಮಂಜೂರಾಗಿರುವ ಯೋಜನೆಗಳಿಗೆ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಕೃಇ/64/ಕೃಯೋಕಾ/2013, ದಿನಾಂಕ: 28-03-2014.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ರವರ ಪ್ರಸ್ತಾವನೆ ಸಂ:ಜಅಇ/ಹಿಉನಿ/ಜಕೋ/ಕೃ.ಅ-2/ಐಡಬ್ಲ್ಯುಎಂಪಿ/ ಅನುದಾನ/2013-14, ದಿ: 15-04-2014.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರವು ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (ಐಡಬ್ಲ್ಯುಎಂಪಿ) ಯೋಜನೆಯಡಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿರುತ್ತದೆ.

( ರೂ.ಕೋಟಿಗಳಲ್ಲಿ)

| ವಿವರ/ ಘಟಕ | ಉಪ ಶೀರ್ಷಿಕೆ | ಬಿಡುಗಡೆಯಾಗಿರುವ ಕೇಂದ್ರದ ಪಾಲು | ಬಿಡುಗಡೆ ಮಾಡಲಾದ ರಾಜ್ಯದ ಪಾಲು |
|---|---|---|---|
| ಸಾಮಾನ್ಯ | 139 | 211.37538 | 12.58413 |
| ವಿಶೇಷ ಘಟಕ ಯೋಜನೆ | 422 | 46.39947 | 2.76237 |
| ಒಟ್ಟು | | 257.77485 | 15.3465 |

ಮೇಲೆ ಓದಲಾದ (2) ರಲ್ಲಿನ ಪ್ರಸ್ತಾವನೆಯಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ರವರು "ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ (ಐಡಬ್ಲ್ಯುಎಂಪಿ) ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಭೂಸಂಪನ್ಮೂಲ ಇಲಾಖೆಯು ರಾಜ್ಯಕ್ಕೆ 2009-10, 2010-11, 2011-12 ಮತ್ತು 2012-13ನೇ ಸಾಲಿನಲ್ಲಿ ರಾಜ್ಯದ 29 ಜಿಲ್ಲೆಗಳಲ್ಲಿ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) 430 ಯೋಜನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಯೋಜನಾ ವೆಚ್ಚವು ಒಟ್ಟು ರೂ.2477.1632 ಕೋಟಿಗಳಾಗಿದ್ದು, ಯೋಜನಾ ವೆಚ್ಚದಲ್ಲಿ ರೂ.2229.4469 ಕೋಟಿಗಳು ಕೇಂದ್ರದ ಪಾಲಿನ ಅನುದಾನವಾಗಿದ್ದು, ಉಳಿದ ರೂ.247.7163 ಕೋಟಿ ರಾಜ್ಯದ ಪಾಲಿನ ಅನುದಾನವಾಗಿರುತ್ತದೆ. ರಾಜ್ಯ ಸರ್ಕಾರವು 2013-14ನೇ ಸಾಲಿನಲ್ಲಿ ಮಂಜೂರಾಗಿರುವ ಯೋಜನೆಗಳಿಗೆ ಒಟ್ಟು ರೂ.710.676 ಕೋಟಿಗಳಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರವು ಯೋಜನಾ ಮಾರ್ಗಸೂಚಿಯಂತೆ, ಎರಡನೇ ಕಂತಿನ ಅನುದಾನವಾಗಿ ರೂ.286.4165 ಕೋಟಿಗಳನ್ನು ಕೇಂದ್ರ ಸರ್ಕಾರದ ಪತ್ರಸಂಖ್ಯೆ:K-11013/18/2012/IWMP/ Karnataka Dt:27-1-2014 ರಲ್ಲಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದ್ದು, ಐಡಬ್ಲ್ಯುಎಂಪಿ ಯೋಜನೆಯಡಿಯಲ್ಲಿ ಈವರೆವಿಗೆ ಕೇಂದ್ರ ಸರ್ಕಾರವು ರಾಜ್ಯಮಟ್ಟದ ನೋಡಲ್ ಏಜೆನ್ಸಿಗೆ ರೂ.274.2426800 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿರುವುದರಿಂದ ಸದರಿ ಅನುದಾನಕ್ಕೆ ಪೂರಕವಾಗಿ ರಾಜ್ಯದ ಪಾಲಿನ ಅನುದಾನವಾಗಿ 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ 2402-00-102-0-30 (ಯೋಜನೆ) ಯಡಿಯಲ್ಲಿ ರಾಜ್ಯದ ಪಾಲಿನ ಅನುದಾನವಾಗಿ ರೂ. 71.11 ಕೋಟಿಗಳ ಅನುದಾನವನ್ನು ಒದಗಿಸಲಾಗಿರುವುದರಿಂದ ಕೇಂದ್ರದ ಪಾಲಿನ ಅನುದಾನಕ್ಕೆ ಪೂರಕವಾಗಿ ಉಳಿಕೆ ರಾಜ್ಯದ ಪಾಲಿನ ಅನುದಾನವಾದ ರೂ.15.1249089 ಕೋಟಿಗಳನ್ನು ಈ ಕೆಳಕಂಡಂತೆ ಬಿಡುಗಡೆ ಮಾಡುವಂತೆ ಹಾಗೂ ಗ್ರಾಂಟ್-ಇನ್-ಏಡ್ ಬಿಲ್ಲಿನ ಮೂಲಕ ಖಜಾನೆಯಿಂದ ಹಣ ಸೆಳೆಯಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಘಟಕ | 2013-14ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ 2ನೇ ಕಂತಿನ ಅನುದಾನ | 2013-14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗ ಬೇಕಾದ 2ನೇ ಕಂತಿನ ಅನುದಾನ | 2013-14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ 2ನೇ ಕಂತಿನ ಅನುದಾನ | ಉಳಿಕೆ ಬಿಡುಗಡೆ ಮಾಡಬೇಕಾದ ರಾಜ್ಯದ ಪಾಲಿನ ಅನುದಾನ |
|---|---|---|---|---|---|
| 1 | 2 | 3 | 4 | 5 | 6 |
| 1 | ಸಾಮಾನ್ಯ | 211.3753800 | 23.4861533 | 12.5841300 | 10.9020233 |
| 2 | ಎಸ್.ಸಿ.ಪಿ. | 46.3994700 | 5.1554967 | 2.7623700 | 2.3931267 |
| 3 | ಟಿ.ಎಸ್.ಪಿ | 16.4678300 | 1.8297589 | | 1.8297589 |
| | ಒಟ್ಟು | 274.2426800 | 30.4714089 | 15.3465000 | 15.1249089 |

ಜಲಾನಯನ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ರೂ.15.1249089 ಕೋಟಿಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಕೃಇ/64/ಕೃಯೋಕಾ/2013, ಬೆಂಗಳೂರು,</u>
<u>ದಿನಾಂಕ: 20-05-2014.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನಲ್ಲಿ "ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮ"(ಐಡಬ್ಲ್ಯುಎಂಪಿ)ಕ್ಕೆ ಸಂಬಂಧಿಸಿದಂತೆ, ಆಯವ್ಯಯದ **ಲೆಕ್ಕ ಶೀರ್ಷಿಕೆ:2402-00-102-0-30**(ಯೋಜನೆ) ರಡಿ ಒದಗಿಸಲಾಗಿರುವ ರಾಜ್ಯದ ಪಾಲಿನ ಅನುದಾನದಲ್ಲಿ **ರೂ.15.1249089 (ಹದಿನೈದು ಕೋಟಿ ಹನ್ನೆರಡು ಲಕ್ಷದ ನಲವತ್ತೊಂಭತ್ತು ಸಾವಿರದ ಎಂಭತ್ತೊಂಬತ್ತು ರೂಪಾಯಿಗಳು ಮಾತ್ರ) ಕೋಟಿಗಳನ್ನು** ಈ ಕೆಳಕಂಡ ಉಪ ಶೀರ್ಷಿಕೆವಾರು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ ಹಾಗೂ ಸದರಿ ಅನುದಾನವನ್ನು Grant-in Aid (GIA) ಬಿಲ್ಲಿನ ಮೂಲಕ ಖಜಾನೆಯಿಂದ ಹಣ ಸೆಳೆದು ಜಿಲ್ಲೆಗಳಿಗೆ ವಿದ್ಯುನ್ಮಾನ ವರ್ಗಾವಣೆ (ECS) ಮೂಲಕ ವರ್ಗಾಯಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಘಟಕ | 2013-14ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ 2ನೇ ಕಂತಿನ ಅನುದಾನ | 2013-14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗ ಬೇಕಾದ 2ನೇ ಕಂತಿನ ಅನುದಾನ | 2013-14ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ 2ನೇ ಕಂತಿನ ಅನುದಾನ | ಉಳಿಕೆ ಬಿಡುಗಡೆ ಮಾಡಬೇಕಾದ ರಾಜ್ಯದ ಪಾಲಿನ ಅನುದಾನ |
|---|---|---|---|---|---|
| 1 | 2 | 3 | 4 | 5 | 6 |
| 1 | ಸಾಮಾನ್ಯ | 211.3753800 | 23.4861533 | 12.5841300 | 10.9020233 |
| 2 | ಎಸ್.ಸಿ.ಪಿ. | 46.3994700 | 5.1554967 | 2.7623700 | 2.3931267 |
| 3 | ಟಿ.ಎಸ್.ಪಿ | 16.4678300 | 1.8297589 | | 1.8297589 |
| | ಒಟ್ಟು | 274.2426800 | 30.4714089 | 15.3465000 | 15.1249089 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ/03/ಟಿಎಫ್‌ಪಿ/2014, ದಿ: 04.04.2014ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿರವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ: ಕೃಇ/81/ಆಂಆಸ/2014, ದಿ: 08-05-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Manjunath 20/5/14

(ಮಂಜುನಾಥ್ ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಪ್ರತಿಯನ್ನು:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ (ಸಂಬಂಧಪಟ್ಟ ಜಿಲ್ಲೆಗಳಿಗೆ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಮುಖಾಂತರ).
6. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, (ಸಂಬಂಧಪಟ್ಟ ಜಿಲ್ಲೆಗಳಿಗೆ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಮುಖಾಂತರ).
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಜಿಲ್ಲಾ ಖಜಾನಾಧಿಕಾರಿಗಳು, (ಸಂಬಂಧಪಟ್ಟ ಜಿಲ್ಲೆಗಳಿಗೆ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಮುಖಾಂತರ).
9. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
10. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕ, ಕೃಷಿ ಇಲಾಖೆ.
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.